ಶ್ರೀ ಡಿ. ಎ. ಚಿನ್ನಪ್ಪ.—ನೇರವಾಗಿ ಅವರಿಗೆ ಕಳುಹಿಸಿ ಕೊಡಲಿ.

ಶ್ರೀ ಮಹಮದ್ ಮೊಯಿನುದ್ದಿನ್.—ಇದು ನಮ್ಮ ಡಿಪಾರ್ಟ್‌ಮೆಂಟ್‌ಗೆ ರೆಫರ್ ಆಗಿದ್ದರಿಂದ ನಾವು ಉತ್ತರವನ್ನು ಕೊಟ್ಟಿದ್ದೇವೆ.

ಯೋಗಿ ಕೊಳ್ಳದಲ್ಲಿ ಪ್ರವಾಸಿ ಕೇಂದ್ರ

೧೬೩೨. ಶ್ರೀ ಮುತ್ತಣ್ಣನವರ್ (ಗೋಕಾಕ್).—ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೋಕಾಕ್ ತಾಲ್ಲೂಕಿನಲ್ಲಿ ಯೋಗಿ ಕೊಳ್ಳದಲ್ಲಿ ಪ್ರವಾಸೋದ್ಯಮ ನಿಗಮದವರು ಪ್ರವಾಸಧಾಮ ಸ್ಥಾಪಿಸಲು ಅಲ್ಲಿಯ ಜನತೆಯಿಂದ ಒತ್ತಾಯಿಸುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಸದರಿ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಎಂ. ಎಲ್. ಮುತ್ತಣ್ಣನವರ್.—೧೯೮೩-೮೪ರಲ್ಲಿ ಮಾಡುತ್ತೇವೆಂದು ಒಪ್ಪಿಕೊಂಡಿದ್ದರು. ಟೂರಿಸಂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ಬಂದು ನೋಡಿಕೊಂಡು ಹೋಗಿದ್ದರು. ಸ್ಥಳೀಯ ಜನರಿಂದ ಬಹಳ ಒತ್ತಾಯ ಇದೆ. ಆದ್ದರಿಂದ ಆದಷ್ಟು ಬೇಗನೆ ಪ್ರವಾಸಿ ಕೇಂದ್ರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರು ಈ ಹಿಂದೆ ಈ ಬಗ್ಗೆ ಪ್ರಶ್ನೆ ಕೇಳಿದ್ದರು. ಅದಾದಮೇಲೆ ಪ್ರವಾಸಿ ಕೇಂದ್ರ ಎಂದು ಗುರುತಿಸುವ ಪ್ರಾಥಮಿಕ ಕೆಲಸ ಮಾಡಿದ್ದೇವೆ. ಆದರೆ ಅಲ್ಲಿನ ಜನಗಳಿಂದ ಯಾವುದೇ ಮನವಿ ಬಂದಿಲ್ಲ. ಅಷ್ಟಕ್ಕೆ ಮಾತ್ರ ಇಲ್ಲವೆಂದು ಹೇಳಿದ್ದೇನೆ. ಈ ವರ್ಷದಲ್ಲಿ ಆನುದಾನ ಬಂದರೆ, (ಬಂದತಕ್ಷಣ) ಗುರುತಿಸಲ್ಪಟ್ಟಿರತಕ್ಕ ಊರನ್ನು ಮುಂದಿನ ವರ್ಷದಲ್ಲಿ ಪ್ರವಾಸಿ ಕೇಂದ್ರವಾಗಿ ಮಾಡುವ ಕೆಲಸವನ್ನು ಕೈಗೊಳ್ಳಲಾಗುವುದು.

ಆಕ್ಸಿಯಂ ಹಾಗೂ ವಾಹನ ತೆರಿಗೆಗಳ ಪರಿಹಾರ ಕೊಡುವ ವಿಚಾರ

೧೬೩೫. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ)-ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ನಗರಸಭೆ ಹಾಗೂ ಪುರಸಭೆಗಳಿಗೆ ಸರ್ಕಾರದವರು ಕೊಡಬೇಕಾದ ಆಕ್ಸಿಯಂ ಹಾಗೂ ವಾಹನ ತೆರಿಗೆಗಳ ಪರಿಹಾರ ಧನವನ್ನು ಸಂದಾಯ ಮಾಡದೆ ಇರುವುದು ನಿಜವೆ.

ಆ) ಹಾಗಿದ್ದಲ್ಲಿ ಹಣ ಸಂದಾಯವಾಗಿಲ್ಲದಿರುವ ನಗರಸಭೆ ಹಾಗೂ ಪುರಸಭೆಗಳೆಷ್ಟು ? (ತಾಲ್ಲೂಕುವಾರು ಮಾಹಿತಿ ತಿಳಿಸುವುದು ಹಾಗೂ ಈ ವಿಳಂಬಕ್ಕೆ ಕಾರಣಗಳೇನು ?